ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 24-09-2021

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ. ಬಿ.ಎಂ.ವೈ ವಕೀಲರಿಂದ

ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ದಾವಾ ಆಸ್ತಿಯನ್ನು ಲ್ಯಾಂಡ್ ಟ್ರಿಬ್ಯೂನಲ್ ರವರು ಮಂಜೂರು ಮಾಡಿದ ಆದೇಶದ ಯಥಾನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ದಾವಾ ಆಸ್ತಿಗೆ ಸಂಬಂಧಿಸಿದಂತೆ ಕಂಪ್ಯೂಟರೈಸ್ಡ್ ಹಣ ಪಾವತಿ ಮಾಡಿದ ಚಲನ್ ಅನ್ನು ತಕರಾರಿಗೆ ಒಳಪಟ್ಟು ನಿಪಿ 2 ಎಂದು, ಖಾತಾ ವರ್ಗಾವಣೆ ಆದ ಬಗ್ಗೆ ಕಂಪ್ಯೂಟರೈಸ್ಡ್ ಎಂ.ಸಿ ಯನ್ನು ಹಾಜರುಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ 3 ಎಂದು, ದಾವಾ ಆಸ್ತಿಯ 3 ಪಹಣಿಗಳನ್ನು ನಿಪಿ 4 ರಿಂದ 6 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ ಕಂದಾಯ ಪಾವತಿ ರಶೀದಿಯನ್ನು ನಿಪಿ 7 ಎಂದು, ಈ ಮೊದಲು ನಾನು ದಾವಾ ಆಸ್ತಿಗಾಗಿ ಅರ್ಜಿ ಸಲ್ಲಿಸಿದಾಗ ಲ್ಯಾಂಡ್ ಟ್ರಿಬ್ಯೂನಲ್ ರವರು ನೀಡಿದ ಆದೇಶದ ಯಥ್ಥಾನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 8 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ ಜಮಾ ಬಂದಿಯನ್ನು ಹಗಾಜರುಪಡಿಸಿದ್ದು ಅದನ್ನು ನಿಪಿ 9 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ ಕನೆಶ್ವರ ದೇವರು ರವರು ಹೆಸರಿನಲ್ಲಿದ್ದ 3 ಪಹಣಿಯನ್ನು ನಿಪಿ 10 ರಿಂದ 12 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ ದೃಡೀಕೃತ ನಕಾಶೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 13 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ ಶನಿವಾರಸಂತೆ ಪೊಲೀಸ್ ಠಾಣೆಗೆ ಪುಕಾರು ನೀಡಿದಾಗ ಹಿಂಬರಹ ಮತ್ತು ಸ್ವೀಕೃತಿಯನ್ನು ಕ್ರಮವಾಗಿ ನಿಪಿ 14 ಮತ್ತು 15 ಎಂದು, ಈ ದಾವೆಗೆ ಸಂಬಂಧಿಸಿದಂತೆ ಒಂದು ದಾಖಲಾತಿಯನ್ನು ನ್ಯಾಯಾಲಯದ ಸೇಫ್ ಕಸ್ಟಡಿಯಲ್ಲಿಟ್ಟಿದ್ದು ಅದನ್ನು ವಕೀಲರ ಕೋರಿಕೆಯ ಮೇರೆಗೆ ತರೆಸಲಾಗಿ, ಸದರಿ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಗಿ, ಲಕೋಟೆಯನ್ನು ನಿಪಿ 16 ಎಂದು ಅದರಲ್ಲಿರುವ ಭೂ ನ್ಯಾಯ ಮಂಡಳಿಯವರು ನೀಡಿದ ಫಾರಂ ನಂ. 11 ಅನ್ನು ನಿಪಿ 17 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ ಮತ್ತೊಮ್ಮೆ ಪುಕಾರು ನೀಡಿದ್ದು ಅದಕ್ಕೆ ಸಂಬಂಧಿದ ಹಿಂಬರಹ ಮತ್ತು ಸ್ವೀಕೃತಿ ನೀಡಿದ್ದು ಅವುಗಳನ್ನು ನಿಪಿ 18 ಮತ್ತು 19 ಎಂದು, ಸೋಮವಾರಪೇಟೆಯ ಭೂ ನ್ಯಾಯ ಮಂಡಳಿಯಲ್ಲಿ ಆದೇಶ ಮಾಡಿ

ಕೊಟ್ಟಿದ್ದು ಅದರ ಮೇಲೆ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿದ್ದು ಸದರಿ ಆದೇಶದ ದೃಡೀಕೃತ ನಕಲನ್ನು ನಿಪಿ 20 ಎಂದು, ಎಂ.ಎ.9/2019 ರ ಆದೇಶದ ದೃಡೀಕೃತ ನಕಲನ್ನು ನಿಪಿ 21 ಎಂದು ಗುರುತಿಸಲಾಯಿತು.

ಮುಖ್ಯ ವಿಚಾರಣೆ ಮುಕ್ತಾಯವಾಯಿತು.

ಪಾಟಿ ಸವಾಲನ್ನು ಕೆ.ಪಿ.ಪಿ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಕನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

Sd/-

ಓದಿ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ., ಸೋಮವಾರಪೇಟೆ.